ಮಾನ್ಯ ಎಂ. ಪಿ. ಪ್ರಕಾಶ್‌ರವರು ಮಾರುತಿಕಾರಿನಲ್ಲಿ ಹೋಗಬಹುದು. ಯಾರು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೋ. ಮಂತ್ರಿಗಳು ಇದನ್ನು ತಿದ್ದಿಕೊಳ್ಳಬೇಕೆಂದು ಹೇಳುತ್ತೇನೆ. ಇದ್ದಕ್ಕೆ ಮೊದಲು ಉತ್ತರವನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ ಈಗಾಗಲೇ ರಸ್ತೆಗಳ ತೀಲಸವನ್ನು ಜಿಲ್ಲಾ ಪರಿಷತ್ ಕೈಗೊಂಡಿದ್ದು ೨೫-೯-೧೯೮೫ ರಿಂದ ಗುತ್ತಿಗೆಯನ್ನು ಕೊಟ್ಟು ಜಲ್ಲೆ ಕಾರ್ಯಕ್ರಮಕ್ಕೆ ೩,೨೨,೫೬೦ ರೂಪಾಯಿಗಳನ್ನು ವಿಚ್ರ್ಯಮಾಡಲಾಗಿದೆ. ಇದರಲ್ಲಿ ಎರಡು ಸಣ್ಣ ಸೇತುವೆಗಳು ಆಗಬೇಕಾಗಿದೆ. ರಸ್ತೆ ಸಂಪೂರ್ಣವಾಗಿ ಆದತಕ್ಷಣ, ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ರಾಜ್ಯ ಸರ್ಕಾರ ಅಲ್ಲಿ ಗಿರಿಧಾಮವೆಂದನ್ನು ಪ್ರವಾಸಿಧಾಮವೆಂದನ್ನಾಗಿ ಘೋಷಿತವಾಗಿಯೂ ಮಾಡುತ್ತೇವೆ, ಎಂದು ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಕೊಡಚಾದ್ರಿಗೆ ಹೆಲಿಪ್ಯಾಡ್ ಮಾಡುವ ವಿಚಾರವನ್ನು ಕೇಳಿದೆ. ಇಲ್ಲ ವೆಂದು ಹೇಳಿದ್ದಾರೆ. ಎಷ್ಟೂ ಮಂತ್ರಿಗಳ ಮನೆಗೂ ಹೆಲಿಪ್ಯಾಡ್ ಮಾಡಿದ್ದಾರೆ.ಅದು ಒಳ್ಳೆಯ ಕೇಂದ್ರ ವೆಂದು ಮಂತ್ರಿಗಳೇ ಒಪ್ಪಿಕೊಳ್ಳುತ್ತಿರುವುದರಿಂದ ಏತಕ್ಕೆ ಅಲ್ಲಿ ಹೆಲಿಪ್ಯಾಡ್ ಮಾಡಬಾರದು ? ಸರ್ಕಾರ ಏತಕ್ಕೆ ಇದನ್ನು ಪರಿಶೀಲಿಸಬಾರದು ?

ಶ್ರೀ ಎಂ ಪಿ. ಪ್ರಕಾಶ್.—ರಾಜ್ಯ ಸರ್ಕಾರದ ಮಂತ್ರಿಗಳ ಮನೆ ಮುಂದೆ ಹೆಲಿಪ್ಯಾಡ್ ಇಲ್ಲ. ಕೇಂದ್ರ ಸರ್ಕಾರದ ಮಂತ್ರಿಗಳ ಮನೆ ಮುಂದೆ ಇದ್ದರೆ ಅದನ್ನು ಪರಿಶೀಲಿಸಿ ಉತ್ತರಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂತ್ರಿಗಳ ಮನೆ ಮುಂದೆ ಹೆಲಿಪ್ಯಾಡ್ ಇಲ್ಲವೆ ?

ಶ್ರೀ ಎಂ. ಪಿ. ಪ್ರಕಾಶ್.—ದೊಡ್ಡ ಮನೆಯಲ್ಲಿ ಹೆಲಿಪ್ಯಾಡ್ ಇದೆ. ದೊಡ್ಡಮನೆ ಎಂಬುದು ಒಂದು ಗ್ರಾಮ, ಅದು ಮಂತ್ರಿಗಳ ಮನೆ ಅಲ್ಲ.

ಶ್ರೀ ಆರ್.ಎನ್. ನಾಯಕ್.—ದೊಡ್ಡಮನೆ ಮನೆ ಅಲ್ಲವೆ? ಅದು ಮುಖ್ಯ ಮಂತ್ರಿಗಳ ಮನೆ ಅಲ್ಲವೆ ?

ಶ್ರೀ ಬಿ. ಸ್ವಾಮಿರಾವ್.—ಮುಖ್ಯಮಂತ್ರಿಗಳ ಮನೆ ದೊಡ್ಡ ಮನೆ. ದೊಡ್ಡಮನೆ ರಾಮಕೃಷ್ಣ ಹೆಗಡೆಯವರು ಎಂದು ಅವರನ್ನು ಕರೆಯುತ್ತಾರೆ.

ಶ್ರೀ ಎಂ.ಪಿ ಪ್ರಕಾಶ್.—ಮುಖ್ಯಮಂತ್ರಿಗಳು ಹುಟ್ಟಿದ ಸ್ಥಳ ದೊಡ್ಡಮನೆ. ಅದು ಒಂದು ಹಳ್ಳಿ.

(ಶ್ರೀ ಸ್ವಾಮಿರಾವ್ ಮತ್ತು ಶ್ರೀ ನಾಯಕರವರು ಪುನಃ ಪ್ರಶ್ನೆ ಕೇಳಲು ಪ್ರಯತ್ನಿಸುತ್ತಿದ್ದರು)

ಅಧ್ಯಕ್ಷರು.—ಇಷ್ಟು ಸಾಕು ನಾಯಕರೆ, ಸ್ವಾಮಿರಾವ್, ನಿಮಗೆ ೩ ಸಾರಿ ಅವಕಾಶ ಕೊಟ್ಟಿದ್ದೇನೆ, ಸಾಕು ಕೂರಿ

ಅಧ್ಯಕ್ಷರು.—ಚಿಕ್ಕಬೋರಯ್ಯನವರ ಪ್ರಶ್ನೆಗೆ ಮಂತ್ರಿಗಳು ಸಮಯ ಕೇಳಿದ್ದಾರೆ.

ಸವದತ್ತಿ ತಾಲ್ಲೂಕಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ

೨೨೩. ಶ್ರೀ ಶಿವಾನಂದ ಎಚ್ ಕೌಜಲಗಿ (ಬೈಲಹೊಂಗಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪೌರಾಡಳಿತ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸವದತ್ತಿ ತಾಲ್ಲೂಕಿನ ಹೊಸಮನಿ ಗ್ರಾಮದಲ್ಲಿ ಟಿ ಕ್ಕಿಂದ ಕುಡಿಯುವ ನೀರನ್ನು ಎಂದಿನಿಂದ ಸರಬರಾಜು ಮಾಡಲಾಗುತ್ತಿದೆ? ಮತ್ತು ಇದಕ್ಕೆ ವಿಚ್ರ್ಯಗುವ ಹಣವೆಷ್ಟು ?

ಅ) ಈ ಊರಿಗೆ ಎನ್.ಆರ್.ಡಬ್ಲ್ಯೂ.ಎಸ್ ಕೆಲಸ ಎಂದು ಮಂಜೂರಾಯಿತು ಮತ್ತು ಅದಕ್ಕೆ ಹಣ ಎಷ್ಟು ಒದಗಿಸಲಾಗಿದೆ.

ಇ) ಈ ಊರಿನಲ್ಲಿ ಕುಡಿಯುವ ನೀರಿನ ತೊಂದರೆ ಇರುವುದರಿಂದ ಕೂಡಲೇ ಈ ಕೆಲಸವನ್ನು ಮುಗಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಮಕ್ಕಳ ಮಂತ್ರಿಗಳು)—.

ಅ) ೨೯-೪-೧೯೮೬ ರಿಂದ ರೂ. ೨,೮೩.೪೩೦ ಖರ್ಚಾಗಿದೆ.

(ಮೇ ೮೮ರವರೆಗೆ)

ಆ) ದಿನಾಂಕ ೨೫-೨-೧೯೮೦ ರಂದು ರೂ. ೩,೯೩,೦೦೦

ಇ) ಕೆಲಸವನ್ನು ೩೧-೩-೧೯೮೪ರಲ್ಲಿ ಪೂರ್ಣ ಗೊಳಿಸಲಾಗಿದೆ. ಜಲಮೂಲವಾದ ಕೊಳವೆ ಬಾವಿ ನೀರು ಇಳುವರಿ ಕಡಿಮೆ ಆಗಿರುವುದರಿಂದ ನೀರು ಸರಬರಾಜು ಯೋಜನೆ ಸ್ಥಗಿತಗೊಂಡಿದೆ. ಈ ಯೋಜನೆ ಪುನರುಜ್ಜೀವನಗೊಳಿಸುವ ಕ್ರಮ ಕೈಗೊಳ್ಳಲಾಗಿದೆ. ಸೆಪ್ಟೆಂಬರ್ ಅಂತ್ಯದಲ್ಲಿ ಮುಗಿಸುವ ನೀರಿಕ್ಷೆ ಇದೆ.

ಶ್ರೀ ಎಸ್. ಹೆಚ್. ಕೌಜಲಗಿ.—ನನ್ನ ಕ್ಷೇತ್ರದ ಹೊಸೂರು ಗ್ರಾಮದಲ್ಲಿ ಕಳೆದ ಎರಡು ವರ್ಷ ಗಳಿಂದ ನೀರಿಲ್ಲದೆ ಟ್ರಕ್ ಮೂಲಕ ನೀರನ್ನು ಒದಗಿಸಲಾಗುತ್ತಿದೆ. ೨೯-೪-೧೯೮೬ ರಿಂದ ಮೇ ೧೯೮೮ ರವರೆಗೆ ೨,೮೩,೪೩೦ ರೂಪಾಯಿಗಳನ್ನು ಟ್ರಕ್ ಸಲುವಾಗಿ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಈ ಊರಿಗೆ ನೀರೊದಗಿಸಲು ೩,೯೩,೦೦೦ ರೂಪಾಯಿ ಹಣ ಎನ್.ಆರ್.ಡಬ್ಲ್ಯೂ.ಎಸ್.ಗೆ ಮಂಜೂರಾಗಿದೆ. ಮಂತ್ರಿಗಳು ಹೇಳಿದ್ದಾರೆ. ಎನ್ ಆರ್.ಡಬ್ಲ್ಯೂ.ಎಸ್. ಕೆಲಸ ೧೯೮೪ರಲ್ಲಿ ಕಂಪ್ಲೀಟ್ ಆಗಿದೆ ಎಂದು. ಇವತ್ತಿನವರೆಗೆ ಆ ಕೆಲಸ ಪೂರ್ಣವಾಗಿಲ್ಲ. ಅಲ್ಲಿ ಆ ದಿಸೆಯಲ್ಲಿ ಯಾವುದೇ ಪ್ರಯತ್ನ ವನ್ನು ಮಾಡಿಲ್ಲವೆಂದು ಹೇಳುತ್ತೇನೆ. ಇದು ಒಂದೇ ಅಲ್ಲ, ಈ ಪ್ರಕಾರ ಅನೇಕ ಕಡೆ ಮಾಡಿಲ್ಲ. ಮುಳ್ಳಿಬಾವಿ, ರುದ್ರಾಪುರ, ಮತ್ತಿತರಊರುಗಳಿಗೆ ಸಹ ಟ್ರಕ್‌ನಿಂದ ನೀರನ್ನು ಸರಬರಾಜು ಮಾಡು ತ್ತಿದ್ದಾರೆ. ಇದಕ್ಕೋಸ್ಕರ ವರ್ಷಕ್ಕೆ ೨ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ.

ಶ್ರೀ ಆರ್, ವಿ. ದೇಶಪಾಂಡೆ —ಹೊಸೂರು ಗ್ರಾಮಕ್ಕೆ ಎನ್.ಆರ್.ಡಬ್ಲ್ಯೂ.ಎಸ್, ಯೋಜನೆ ಗಾಗಿ ೩ ಲಕ್ಷದ ೯೩ ಸಾವಿರ ರೂಪಾಯಿಗಳಿಗೆ ಫೆಬ್ರುವರಿ ೮೮ರಂದು ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಆಗಿದೆ. ೨೫ ರಂದು ಟೆಕ್ನಿಕಲ್ ಅಪ್ರೂವಲ್ ಕೊಡಲಾಯಿತು. ಸ್ಕೀಂ ಕಂಪ್ಲೀಟ್ ಆಗಬೇಕಾದರೆ ೩,೯೩ ೦೦೦ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅವರು ಇನ್ನೂ ಕಂಪ್ಲೀಟ್ ಆಗಿಲ್ಲವೆನಿದೆ ಅನ್ನುತ್ತಾರೆ. ಯೋಜನೆ ಕಂಪ್ಲೀಟ್ ಆಗಿದೆ. ಆದರೆ ಹೈ ಈಲ್ಡಿಂಗ್ ಬೋರ್‌ವೆಲ್ ಆಗಿಲ್ಲ ಆದರಲ್ಲಿ ವಾಟರ್ ಲೆವಲ್ ಕಡಿಮೆಯಾದ ಕಾರಣ ಸ್ಕೆರ್ಸಿಟಿ ಕಾಲದಲ್ಲಿ ತೆರೆದ ಬಾವಿಯನ್ನು ತೆರೆಯಲಿಕ್ಕೆ ೬೩ ಸಾವಿರ ರೂಪಾಯಿಗಳನ್ನು ಮಂಜೂರ್ಮಾಡಿದ್ದು ಕೆಲಸ ನಡೆಯುತ್ತಿದೆ ಪಂಪ್ ಫಿಕ್ಸ್ ಮಾಡಲಿಕ್ಕೆ ೪೫ ಸಾವಿರ ರೂಪಾಯಿಗಳನ್ನು ಮಂಜೂರ್ಮಾಡಿದ್ದೇವೆ. ಸೆಪ್ಟಂಬರ್ ವೇಳೆಗೆ ಕೆಲಸ ಮುಗಿಯುತ್ತದೆ. ಬೇರೆ ಬೇರೆ ಹಳ್ಳಿಗಳ ಬಗ್ಗೆ ಕೇಳಿದ್ದಾರೆ. ಆದರೆ ಮಾಹಿತಿ ಈಗ ಇಲ್ಲ. ಬೇರೆ ಪ್ರಶ್ನೆ ಹಾಕಿದರೆ ಉತ್ತರಿಸುತ್ತೇನೆ.

ಶ್ರೀ ಎಸ್. ಎಚ್ ಕೌಜಲಗಿ.—ಹೋದ ವರ್ಷ ಎರಡು ವರ್ಷಗಳ ಹಿಂದೆ ೩೦ ಸಾವಿರ ರೂಪಾಯಿಗಳನ್ನು ತೆರೆದ ಬಾವಿ ಸಲುವಾಗಿ ಲ್ಯಾಂಡ್ ಆರ್ಮಿಯವರಿಗೆ ಕೊಡಲಾಗಿತ್ತು. ಆದರೂ ಬಾವಿ ತೆಗೆಯಲಿಲ್ಲ. ಆ ಕಾರಣದಿಂದ ಎರಡು ಲಕ್ಷ ರೂಪಾಯಿ ಟ್ರಕ್ಕಿನ ಸಲುವಾಗಿ ಕೊಡಬೇಕಾಯಿತು, ಏತಕ್ಕೆ ತಡ ಮಾಡಿದ್ದಾರೆ ಎಂದು ಕೇಳಿದರೆ ಇಷ್ಟರಲ್ಲೇ ಮಾಡುತ್ತೇವೆ. ಎಂದು ಹೇಳುತ್ತಾರೆ. ಇವರಿಗೆ ನೀರಿನ ತಾಪತ್ರಯ ಗೊತ್ತಾಗುವುದಿಲ್ಲ ?

ಶ್ರೀ ಆರ್. ವಿ.ದೇಶಪಾಂಡೆ.—ಲ್ಯಾಂಡ್ ಆರ್ಮಿಗೆ ಕೆಲಸ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಆ ಇನ್‌ಫರ್ಮೇಷನ್ ನನ್ನಲ್ಲಿ ಈಗಿಲ್ಲ. ಆದರೆ ಕೆಲಸ ನಡೆಯುತ್ತಿದೆ. ೧೯೮೭-೮೮ಕ್ಕೆ ೬೩ ಸಾವಿರ

ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಕೆಲಸ ನಡೆಯುತ್ತಿದೆ. ಸೆಪ್ಟೆಂಬರ್ ಒಳಗೆ ಕೆಲಸ ಮುಗಿಯುವ ನಿರೀಕ್ಷೆ ಮಾಡಿದ್ದೇವೆ ಆದಷ್ಟು ಬೇಗ ಕೆಲಸ ಮುಗಿಸುವುದಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಎಸ್ ಹೆಚ್. ಕೌಜಲಗಿ.—೨,೯೪,೦೦೦ ರೂಪಾಯಿಗಳನ್ನು ಎರಡು ವರ್ಷದೊಳಗೆ ಟ್ರಕ್ಕಿನಿಂದ ನೀರು ಸರಬರಾಜು ಮಾಡವುದಕ್ಕೆ ಕೊಟ್ಟಿದ್ದಾರೆ. ಇದರಿಂದ ಎಷ್ಟು ಸ್ಪೀಡಾಗಿ ಕೆಲಸ ನಡೆಯುತ್ತಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಪ್ರತಿಯೊಂದು ಊರಿನಲ್ಲೂ ಇದೇರೀತಿ ನಡೆದಿದೆ, ಏತಕ್ಕೆ ಎಂಬುದನ್ನು ತಿಳಿದುಕೊಳ್ಳಬೇಕು. ೨,೯೪,೦೦೦ ರೂಪಾಯಿಗಳನ್ನು ಟ್ರಕ್ಕಿನ ಸಲುವಾಗಿ ಎರಡು ವರ್ಷದೊಳಗೆ ಖರ್ಚು ಮಾಡುತ್ತಾರೆ. ಆದರೆ ೩ ಲಕ್ಷ ರೂಪಾಯಿ ಖರ್ಚು ಮಾಡಿದ್ದರೆ ಕೆಲಸ ಮುಗಿಸಬಹುದಾಗಿತ್ತು ಎಲ್ಲಾ ಕಡೆಯೂ ಹೀಗೆ ನಡೆದಿದೆ ಎನ್.ಆರ್.ಡಬ್ಲ್ಯೂ. ಕೆಲಸವನ್ನು ಸೂಪರ್‌ವೈಸ್ ಮಾಡುವವರು ಯಾರು ಇಲ್ಲ ಅದರ ಬಗ್ಗೆ ಕೇಳುವವರು ಹೇಳುವವರು ಯಾರೂ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ.— ಮಾನ್ಯ ಸದಸ್ಯರು ಅಪಾದನೆ ಮಾಡುವುದಾದರೆ ನನಗೆ ಸರಿಯಾದ ಮಾಹಿತಿಯನ್ನು ಕೊಟ್ಟರೆ ನಾನು ತನಿಖೆ ಮಾಡಿಸುತ್ತೇನೆ. ಕೊಳವೆ ಬಾವಿ ತೃಪ್ತಿ ಆಗಿದೆ ಎಂದು ಹೇಳಿದ್ದೇವೆ. ಕೆಲಸ ನಡೆದ ಬಗ್ಗೆಯೂ ಹೇಳಿದ್ದೇವೆ. ವಿಳಂಬ ಆಗುವುದಕ್ಕೆ ಅಧಿಕಾರಿಗಳ ನೆಗ್ಲಿಜಿಯನ್ಸ್ ಕಾರಣವಾಗಿದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅದರ ಬಗ್ಗೆ ಚೌಕಶಿ ಮಾಡಿಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ —ಅಧ್ಯಕ್ಷರೇ...

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ಮೂರು ಸಾರಿ ನಾನು ಅವಕಾಶ ಕೊಟ್ಟಿದ್ದೇನೆ. ಮತ್ತೇ ನಾಲ್ಕನೆ ಸಾರಿ ಕೇಳುತ್ತಿದ್ದೀರಿ. ನಾನು ಮೊದಲೇ ಎರಡು ಸಾರಿಗಿಂತ ಹೆಚ್ಚಿಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದೇನೆ. ಸ್ವಾಮಿರಾವ್ ಅವರಿಗೂ ಮೂರು ಸಾರಿ ಕೊಟ್ಟಿದ್ದೇನೆ. ನಿಮಗೂ ಕೊಟ್ಟಿದ್ದೇನೆ. ಈಗ ಮುಂದಿನ ಪ್ರಶ್ನೆಯನ್ನು ವಲ್ಲಾರಿಗೌಡರ ಪರವಾಗಿ ಖರ್ಗೆಯವರು ಕೇಳಿ,

"ಕೂಲಿಗಾಗಿ ಕಾಳು" ಯೋಜನೆಯಲ್ಲಿ ಅವ್ಯವಹಾರವಾಗಿರುವುದು

೧೮೫೭. ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಪ್ರತಿಯೊಂದು ಮಂಡಲ್ ಪಂಚಾಯತಿಗೆ ''ಕೂಲಿಗಾಗಿ ಕಾಳು'' ಯೋಜನೆಯಲ್ಲಿ ಎಷ್ಟು ಟನ್ನಿನಷ್ಟು ಗೋಧಿ ಹಾಗೂ ಅಕ್ಕಿಯನ್ನು ಕೊಡಲಾಗಿದೆ (ಮಂಡಲವಾರು ವಿವರ ಹಾಗೂ ಕೊಟ್ಟಿರುವ ದಿನಾಂಕದ ವಿವರ ನೀಡುವುದು)

ಆ) ಕೂಲಿಗಾಗಿ ಕಾಳು ಯೋಜನೆಯ ಕಾರ್ಯಕ್ರಮದಲ್ಲಿ ಕೂಲಿಕಾರರಿಗೆ ಕಾಳು ಕೊಡದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಬೆಳಗಾವಿ ಜಿಲ್ಲೆಗೆ ಕೂಲಿಗಾಗಿ ಕಾಳು ಯೋಜನೆಗಾಗಿ ಕೊಟ್ಟಿರುವ ಕಾಳಿನ ದುರ್ವ್ಯವಹಾರದಲ್ಲಿ ತೊಡಗಿರುವ ಅಪರಾಧಿಗಳನ್ನು ಗುರುತಿಸಲು ಸಿ.ಐ.ಡಿ. ತನಿಖೆಗೆ ಒಪ್ಪಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ, ಹಾಗಿದ್ದಲ್ಲಿ ಯಾವಾಗ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮತ್ತು ಪಶುಸಂಗೋಪನಾ ಮಂತ್ರಿಗಳು).—

ಅ) ದಿನಾಂಕ ೩೧-೧೨-೧೯೮೭ರಂದು ಹುಕ್ಕೇರಿ ತಾಲ್ಲೂಕು ಮಂಡಲ್ ಪಂಚಾಯತಿಗಳಿಗೆ ಈ ಕೆಳಕಂಡಂತೆ ಅಕ್ಕಿ ಹಾಗೂ ಗೋಧಿಯನ್ನು ಕೊಟ್ಟಿರುತ್ತದೆ.